ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6,MAY-JUNE 2022, Pp. 74-79
©*IIMRD*, Mysuru.
IIMRD JOURNALS
www.iimrd.com

# ಕೋಟಿಗಾನಹಳ್ಳಿ ರಾಮಯ್ಯ ಅವರ ನಾಟಕಗಳಲ್ಲಿ ಮಹಿಳೆ

**ಪ್ರಕಾಶ್. ಕೆ[*] ಮತ್ತು ಡಾ. ಎಂ.ಬಿ ಸುರೇಶ[**]**
[*]ಸಂಶೋಧಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು.
[**]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು.

**ಸಾರಾಂಶ (Abstract)**

*ಮನುಕುಲದ ಇತಿಹಾಸದ ಪುಟಗಳನ್ನು ಒಮ್ಮೆ ನೋಡಿದರೆ ಮಹಿಳೆಯರು ಸಂಸ್ಕೃತಿ ಮತ್ತು ನಾಗರಿಕತೆಗಳ ಸಮರ್ಥ ರಕ್ಷಕರೂ, ಪ್ರೀತಿಯುಕ್ತ ಪೋಷಕರು, ಪ್ರಚಾರಕರೂ ಆಗಿದ್ದಾರೆ ಎಂಬ ಸತ್ಯದ ದರ್ಶನವಾಗುತ್ತದೆ. "ಒಂದು ದೇಶದ ಪ್ರಗತಿಯನ್ನು ಆ ದೇಶದ ಸ್ತ್ರೀಯರಿಗೆ ಕೊಟ್ಟಿರುವ ಸ್ಥಾನಮಾನಗಳಿಂದ ಅಳೆಯಬಹುದು" ಎನ್ನುವ ಅಂಬೇಡ್ಕರ್ ಅವರ ಮಾತು ಬಹಳ ಉಚಿತವೆನಿಸುತ್ತದೆ. ಒಂದು ಸಮಾಜದಲ್ಲಿ ಮಹಿಳೆಯರಿಗೆ ಲಭ್ಯವಾಗುವ ಸ್ಥಾನಮಾನಗಳು ಆ ಸಮಾಜದ ಅಭಿವೃದ್ಧಿ ಮಟ್ಟವನ್ನು ತಿಳಿಸುತ್ತದೆ. ಪ್ರಾಚೀನ ಕಾಲದಿಂದಲೂ ಮಹಿಳೆಯರನ್ನು ನಾಲ್ಕು ಗೋಡೆಗಳಿಗೆ ಸೀಮಿತ ಮಾಡಿ, ಮಕ್ಕಳನ್ನು ಹೆರುವ, ಪೋಷಿಸುವುದಕ್ಕೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದರೆ ಪ್ರಸ್ತುತ ಆಧುನಿಕ ಯುಗದಲ್ಲಿಯೂ ಕೂಡ ಎಲ್ಲಾ ರಂಗಗಳಲ್ಲಿಯೂ ಮಹಿಳೆಯರಿಗೆ ಮುಕ್ತ ಪ್ರವೇಶ ಕಲ್ಪಿಸದಿರುವುದು ಸಮಾಜದ ವಿಪರ್ಯಾಸವಾಗಿದೆ.*

**ಮುಖ್ಯಪದಗಳು (Keywords):** *ಅಸಮಾನತೆ, ಕನ್ನಡ ನಾಟಕ, ದಲಿತ, ಮಹಿಳೆ, ಶೋಷಣೆ.*

## ಪೀಠಿಕೆ

ವೇದಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿ, ಲೋಪಮುದ್ರ, ಇನ್ನು ಮುಂತಾದ ಮಹಿಳೆಯರು ಕಂಡುಬಂದರೂ, ಅನಂತರದ ವೈದಿಕ ಕಾಲದಲ್ಲಿ ಸಂಪೂರ್ಣವಾಗಿ ಮಹಿಳೆಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗಿತ್ತು. ಬುದ್ಧ ಯುಗದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ದೊರೆಯಿತು. ಬಸವ ಯುಗದಲ್ಲಿ ಸ್ತ್ರೀಗೆ ಸಮಾನತೆಯನ್ನು ಸಾರಲಾಯಿತು. ತರುವಾಯದ ದಿನಗಳಲ್ಲಿ ಸ್ತ್ರೀ ದ್ವಿತೀಯ ದರ್ಜೆಯಾಗಿಯೇ ಉಳಿಯಬೇಕಾಯಿತು. ಆಧುನಿಕ ಯುಗದಲ್ಲಿ ಸ್ತ್ರೀ ಸಮಾನತೆಯ ಹಕ್ಕು, ಬಾಧ್ಯತೆಗಳ ಬಗೆಗೆ ಪಾಶ್ಚಿಮಾತ್ಯರಲ್ಲಿ ಪ್ರಜ್ಞೆ ಮೂಡಿ ಅದರ ಬಗೆಗೆ ಚಿಂತಿಸತೊಡಗಿದರು. ಅವರಲ್ಲಿ ಪ್ರಮುಖರೆಂದರೆ ಲೇಡಿಮೇರಿ ವರ್ಟಲಿ ಮಾಂಟೆಗೋ, ವರ್ಜಿನಿಯಾ ವುಲ್ಫ್, ಸಿಮೋನ್‌ದ ಬೋವಾ, ಎಲೆನ್ ಶೋ ವಾಲ್ಟರ್, ಕೇಟ್ ಮಿಲೇಟ್ಸ್ ಮುಂತಾದವರು. ಭಾರತದಲ್ಲಿ ಜೋತಿ ಬಾಪುಲೆ, ಗಾಂಧೀಜಿ, ಅಂಬೇಡ್ಕರ್ ಮುಂತಾದವರು ಸ್ತ್ರೀ ಸಮಾನತೆಯ ಬಗೆಗೆ ಹೋರಾಟಗಳನ್ನು ನಡೆಸಿದರು. ಅದರಲ್ಲಿಯೂ ಅಂಬೇಡ್ಕರ್ ಅವರು ಅದ್ವಿತೀಯವಾಗಿ ನಿಲ್ಲುವಂತವರಾಗಿದ್ದಾರೆ.

*Please cite this article as: ಪ್ರಕಾಶ್. ಕೆ ಮತ್ತು ಎಂ.ಬಿ ಸುರೇಶ.* (2022). ಕೋಟಿಗಾನಹಳ್ಳಿ ರಾಮಯ್ಯ ಅವರ ನಾಟಕಗಳಲ್ಲಿ ಮಹಿಳೆ. *ಪ್ರತಿಬಿಂಬ:ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ. 74–79.*

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯ ಪರವಾಗಿ ಧ್ವನಿ ಎತ್ತಿದವರು ಮೊದಲಿಗೆ ಪುರುಷ ಸಾಹಿತಿಗಳು ಎನ್ನುವುದನ್ನು ಮರೆಯುವಂತಿಲ್ಲ. ಅನಂತರ ಸ್ತ್ರೀ ಸಾಹಿತಿಗಳು ತಮ್ಮ ನೋವು, ದುಃಖ, ಹತಾಶೆ ಇನ್ನು ಮುಂತಾದ ಅಂಶಗಳನ್ನು ಸಾಹಿತ್ಯದಲ್ಲಿ ಬಿಂಬಿಸತೊಡಗಿದರು. ಸ್ತ್ರೀಯರ ಬದುಕು, ಭವಣೆ, ಶೋಷಣೆಯ ಬಗೆಗೆ ಧ್ವನಿ ಎತ್ತಿದಂತಹ ಆಧುನಿಕ ನಾಟಕಕಾರರಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಅವರೂ ಒಬ್ಬರಾಗಿದ್ದಾರೆ. ಇವರ ನಾಟಕಗಳಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಲಿಂಗ ತಾರತಮ್ಯ, ಅಸ್ಪೃಶ್ಯತೆ, ಸಾಮಾಜಿಕ ನಿರ್ಬಂಧ, ಶೈಕ್ಷಣಿಕ ವಿಚಾರದಲ್ಲಿ ಪುರುಷರ ಮಲತಾಯಿ ಧೋರಣೆ ಇನ್ನು ಮುಂತಾದ ಅಂಶಗಳನ್ನು ಒಳಗೊಂಡಿದೆ. ಈ ಎಲ್ಲಾ ಸಮಸ್ಯೆಗಳು ನಿರ್ಮೂಲನೆಯಾಗಿ ಹೆಣ್ಣು–ಗಂಡುಗಳ ನಡುವೆ ಅಭೇದವನ್ನು ಕಲ್ಪಿಸಿ, ಸಮ ಸಮಾಜವು ನಿರ್ಮಾಣವಾಗಬೇಕು ಎನ್ನುವ ಸಾರವನ್ನು ತಮ್ಮ ನಾಟಕಗಳಲ್ಲಿ ಚಿತ್ರಿಸಿದ್ದಾರೆ. 'ಕೊನೆ ಎಂದು' ಎಂಬ ನಾಟಕದಲ್ಲಿ ದಲಿತರು ಮತ್ತು ಮಹಿಳೆಯರ ಮೇಲೆ ದಿನನಿತ್ಯ ಒಂದಲ್ಲ ಒಂದು ರೀತಿಯ ಮಾನಭಂಗ, ಅತ್ಯಾಚಾರ, ಕೊಲೆ ಇನ್ನು ಮುಂತಾದ ದೌರ್ಜನ್ಯಗಳು ಯಾವ ರೀತಿ ನಡೆಯುತ್ತದೆ. ಹಾಗೂ ತಮಿಳುನಾಡಿನ ಮಧುರೆ, ಬಿಹಾರದ ಬೆಲ್ಚಿ, ಆಂಧ್ರದ ಕೊಪ್ಪ, ಕರ್ನಾಟಕ ನಾಗಪಲ್ಲಿ, ಬೆಂಡಿಗೇರಿ, ಹಂಗರಹಳ್ಳಿ ಇನ್ನು ಮುಂತಾದ ಕಡೆಗಳಲ್ಲಿ ಯಾವ ರೀತಿ ನಡೆದಿದೆ ಎಂಬುದನ್ನು ಅಂಕಿಅಂಶಗಳ ಸಮೇತವಾಗಿ ಚಿತ್ರಿಸಿದ್ದಾರೆ. 1997 ಡಿಸೆಂಬರ್ 2ರಂದು ತಮಿಳುನಾಡಿನ ಮಧುರೈನಲ್ಲಿ ದಲಿತನಾಯಕರೊಬ್ಬರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಈ ವಿಚಾರಕ್ಕೆ ಸಂಬಂಧಿಸಿದಂತೆ ಪೋಸ್ಟರ್‌ಗಳನ್ನು ಗೋಡೆಗಳ ಮೇಲೆ ಅಂಟಿಸಲಾಗಿತ್ತು. ಇದನ್ನು ಆ ಊರಿನ ಜನರಾದ 'ದೇವರ್' ಎನ್ನುವವರು ಸುಟ್ಟು ಹಾಕಿ ಬಿಡುತ್ತಾರೆ. ಈ ಘಟನೆಯ ವಿರುದ್ಧವಾಗಿ ದಲಿತರು ರಸ್ತೆ ತಡೆದು ಪ್ರತಿಭಟನೆ ಮಾಡುತ್ತಾರೆ. ಈ ನೆಪವನ್ನು ಇಟ್ಟುಕೊಂಡು ಆ ಊರಿಗೆ ಬೆಳಗಿನ ಜಾವ ಒಂಭತ್ತು ಗಮಟೆಗೆ ಪೋಲಿಸ್ ವ್ಯಾನ್ ಮತ್ತು ಜೀಪುಗಳು ಬಂದು ರೈಡ್ ಮಾಡಿ ಲಾಟಿ ಚಾರ್ಜ್ ಮಾಡುತ್ತಾರೆ. ಈ ಸಂದರ್ಭದಲ್ಲಿ ಪೋಲಿಸ್ ಕೈಗೆ ಸಿಲುಕಿ ಮಾನಭಂಗಕ್ಕೆ ಒಳಗಾಗಿ ಜೈಲಿಗೆ ಸೇರಿದವಳು ಗುರುಸ್ವಾಮಿ ಅಮ್ಮಾಳ್ ಎನ್ನುವ ಮಹಿಳೆ.

ಗುರುಸ್ವಾಮಿ ಅಮ್ಮಳ್ ದಿನಕ್ಕೆ 25 ರೂಪಾಯಿಗೆ ಕೂಲಿ ಮಾಡಿ ಬದುಕುತ್ತಿದ್ದವಳು. ಆ ಊರಿಗೆ ಬಂದ ರಾಜೇಶ್ ಧಾರ್ ಎಂಬ ಎಸ್.ಪಿ. ಅವಳನ್ನು ಸೂಳೆ ಎಂದು ಸಂಭೋಧಿಸುತ್ತಾನೆ. ಠಾಣೆಗೆ ಬರುವಂತೆ ಒತ್ತಾಯಿಸುತ್ತಾನೆ. ಆಕೆ ಅವನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ವಿಫಲವಾಗುತ್ತಾಳೆ. ಸಮಯಕ್ಕೆ ಸರಿಯಾಗಿ ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿಗಳ ಸಹಾಯ ಬೇಡುತ್ತಾಳೆ. ಆದರೆ ಆತನೂ ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಎನ್ನುವ ಹಾಗೆ ಎಸ್.ಪಿ. ಮೇಲೆ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳದೆ ಶ್ರೀಮಂತರ ನಾಯಿಯ ಹಾಗೆ ವರ್ತಿಸುತ್ತಾನೆ. ಮಾರನೆ ದಿನ ನೂರಕ್ಕೂ ಹೆಚ್ಚು ಪೋಲಿಸ್ ದಂಡು ಆ ಹಳ್ಳಿಗೆ ಬರುತ್ತದೆ. ಮನೆಯ ಬಾಗಿಲುಗಳನ್ನು ಮುರಿದು ಒಳಗೆ ನುಗ್ಗಿ ಅಮ್ಮಾಳ್‌ನನ್ನು ಅರೆಬೆತ್ತಲೆ ಮಾಡಿ, ಸೂಳೆಗಾರಿಕೆ ನೆಪವೊಡ್ಡಿ ಪೋಲಿಸ್ ಠಾಣೆಗೆ ಎಳೆದೊಯ್ಯುವುದು ಪೋಲಿಸರ ಮೃಗೀಯ ವರ್ತನೆಯಾಗಿದೆ. ಆಕೆ ಗರ್ಭಿಣಿ ಎಂಬುದ್ನು ಮರೆತು, ಸಂಪೂರ್ಣವಾಗಿ ಬೆತ್ತಲೆ ಮಾಡಿ, ನಾಯಿಯ ರೀತಿ ಎಳೆದೊಯ್ಯುತ್ತಾರೆ. ಅವಳು ಎಷ್ಟು ಬೇಡಿದರೂ ಆಸ್ಪತ್ರೆಗೆ ಸೇರಿಸುವುದಿಲ್ಲ. ಕೊನೆಗೆ ಹತ್ತು ದಿನಗಳ ಬಳಿಕ ಜೈಲಾಸ್ಪತ್ರೆಯಲ್ಲಿ

ಗರ್ಭಪಾತವಾಗುತ್ತದೆ. ಕಳ್ಳಭಟ್ಟಿಯ ಕೇಸನ್ನು ಅವಳ ಮೇಲೆ ಹಾಕಿ ಸಂಪೂರ್ಣವಾಗಿ ಜೈಲಿನಲ್ಲೆ ಕೊಳೆಯುವಂತೆ ಮಾಡುವುದು ಪೋಲಿಸರ ಕ್ರೌರ್ಯವಾಗಿದೆ.

ಚೆನ್ನೈ ಸಮೀಪದ ಸ್ಲಂನಲ್ಲಿ ನಲವತ್ತುಮೂರು ವರ್ಷದ ಮಹಿಳೆಯನ್ನು ಅವಳ ಮಗನು ಕೋರ್ಟ್ ಕೇಸ್‌ವೊಂದರಲ್ಲಿ ಸಿಕ್ಕಿಕೊಂಡದ್ದ ನೆಪವೊಡ್ಡಿ ಅವಳನ್ನು ಬಂಧಿಸಿ, ಅವಳ ಸೊಸೆ ಮತ್ತು ಮಗಳ ಕಣ್ಣೆದುರೇ ಮಾನಭಂಗ ಮಾಡಿ, ಕೊಂದು ಶವವನ್ನು ತಂದು ಅವಳದೆ ಗುಡಿಸಲಿಗೆ ಬಿಸಾಡಿ ಬೆಂಕಿ ಹಚ್ಚುವ ಪೋಲಿಸರ ನೀಚಕೃತ್ಯ ಎಲ್ಲರೆದೆಯೊಳಗೆ ಬೆಂಕಿ ಹೊತ್ತಿಸುತ್ತದೆ. ಹೀಗೆ ಗುರಿಯಾದವರು ಒರ ತಾಂಡುಹಳ್ಳಿಯ ಗುಮ್ಮಾಳ್, ಕೊಯಮತ್ತೂರಿನ ವಿಜಯ, ಮುತ್ತಾಂಡಿ ಕುಪ್ಪಂನ ವಸಂತ, ವಣ್ಣಾರ ಪೊಟ್ಟಿಯ ಪೂನಕೊತ್ತೈ ಇನ್ನು ಮುಂತಾದವರು, ಬಿಹಾರದ ಬೆಲ್ಚಿಯಲ್ಲಿ 1977 ಮೇ 27 ರಂದು ದಲಿತ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರ, ಬಿಹಾರದ ಲಕ್ಷ್ಮಣಪುರದಲ್ಲಿ 'ರಣವೀರ್ ಸೇನಾ' ಕೊಲೆಗಡುಕರು ನಿರಂತರವಾಗಿ ಎರಡು ಗಂಟೆಗಳ ಕಾಲ ಗುಂಡು ಹಾರಿಸಿ 61 ಜನರನ್ನು ಕೊಂದು ಹಾಕುತ್ತಾರೆ. ಅದರಲ್ಲಿ 27 ಜನ ಮಹಿಳೆಯರು ಸೇರಿರುತ್ತಾರೆ. ಕರ್ನಾಟಕ ಯಾವ ಬಿಹಾರ, ತಮಿಳುನಾಡಿಗೂ ಕಮ್ಮಿ ಇಲ್ಲ. ನಾಗಪಲ್ಲಿಯಲ್ಲಿ ತಾಯಿ ಮತ್ತು ಇಬ್ಬರು ಮಕ್ಕಳನ್ನು ತುಂಡು ತುಂಡಾಗಿ ಕತ್ತರಿಸಲಾಗಿದೆ. ವಣಿನೂರಿನಲ್ಲಿ ಹೆಣ್ಣಿನ ಬೆತ್ತಲೆ ಮೆರವಣಿಗೆ ನಡೆದಿದೆ. ಈ ಎಲ್ಲಾ ಘಟನೆಗಳು ಭಾರತೀಯರ ಎದೆಯನ್ನು ತಲ್ಲಣಗೊಳಿಸದೆ ಸುಮ್ಮನಿರಲಾರದು.

ಪ್ರಪಂಚದಲ್ಲಿ ತನ್ನದೇ ಶ್ರೇಷ್ಠತೆಯನ್ನು ಮೆರೆದ ಭಾರತ ದೇಶದೊಳಗೆ ಇಂತಹ ಘಟನೆಗಳು ನಡೆಯುತ್ತದೆ ಎನ್ನುವುದಕ್ಕೆ ಮಹಿಳೆಯರ ಮೇಲೆ ನಡೆಯುತ್ತಿರುವ ಅಮಾನವೀಯ ಘಟನೆಗಳೇ ಸಾಕ್ಷಿಯಾಗಿದೆ, ದೇವರು, ಜಾತಿ, ಧರ್ಮದ ಹೆಸರಿನಲ್ಲಿ ದಲಿತ ಹೆಣ್ಣು ಮಕ್ಕಳನ್ನು ಶೋಷಿಸುತ್ತಾ ಬಂದಿದ್ದಾರೆ. ಹಿಂದೂ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲ್ವರ್ಗದ ಮಹಿಳೆ, ಹಿಂದುಳಿದ ವರ್ಗದ ಮಹಿಳೆಯರಿಗಿಂತ, ದಲಿತ ಮಹಿಳೆಯರು ಭಿನ್ನವಾಗಿ ನಿಲ್ಲುತ್ತಾರೆ. ಒಂದೆಡೆ ಜಾತಿ ಪಾಶವಾದರೆ ಮತ್ತೊಂದೆಡೆ ಶೋಷಣೆಯ ಪಾಶ ಅವರನ್ನು ಹಿಡಿದು ಎಳೆಯುತ್ತದೆ. ಸಂವಿಧಾನದ 17ನೆ ವಿಧಿಯಲ್ಲಿ ಅಸ್ಪೃಶ್ಯತೆ ಆಚರಣೆ ಕಾನೂನುಬಾಹಿರ ಎಂದು ಹೇಳಿದ್ದರೂ, ಸಮಾಜದಲ್ಲಿ ಅದು ಆಚರಣೆಯಲ್ಲಿರುವುದು ವಿಷಾದನೀಯವಾಗಿದೆ. ಸಾಮಾಜಿಕ ಸಮಸ್ಯೆಗಳಾದ ಶೋಷಣೆ, ಲಿಂಗತಾರತಮ್ಯ ಇವುಗಳನ್ನು ಪ್ರಶ್ನಿಸುವುದಲ್ಲದೆ, ಒಂದು ಸಮಸಮಾಜದ ಆಶಯ ನಾಟಕದಲ್ಲಿ ವ್ಯಕ್ತವಾಗಿದೆ. ಅಂತರರಾಷ್ಟ್ರೀಯ ಕಟಕಟೆಯಲ್ಲಿ ಭಾರತೀಯರಾದ ನಾವು ತಲೆ ತಗ್ಗಿಸಿ ನಿಲ್ಲಬೇಕೆ? ಈ ಎಲ್ಲಾ ಸಮಸ್ಯೆಗಳಿಗೆ ಕೊನೆ ಎಂದು? ಎನ್ನುವ ಮೂಲಕ ನಾಟಕಕಾರರು ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸಿದ್ದಾರೆ.

'ಮೆಕಾನಿಕ್ ಗೌರಿ' ನಾಟಕದಲ್ಲಿ ಗೌರಿ ಎನ್ನುವ ಹೆಣ್ಣು ಮಗಳ ಪಾತ್ರ ಬಹಳ ಮುಖ್ಯವಾದುದಾಗಿದೆ. ನಾಟಕದ ಕೇಂದ್ರ ಬಿಂದುವೇ ಗೌರಿ ಆಗಿದ್ದಾಳೆ. ಅವಳ ಛಲ, ಆತ್ಮಸ್ಥೈರ್ಯ, ಧೈರ್ಯ ಮಹಿಳೆಯರಿಗೆ ಮಾತ್ರವಲ್ಲದೇ ಪುರುಷರಿಗೂ ಕೂಡ ಆದರ್ಶಮಯವಾಗಿದೆ. ಮಹಿಳೆ ಅಸಮರ್ಥಳು ಎನ್ನುವವರ ಬಾಯಿಯನ್ನು ಕಟ್ಟಿಹಾಕುತ್ತಿದೆ. ಸಟ್ಟುಗ ಹಿಡಿಯುವ ಕೈಗಳು ಸ್ಪ್ಯಾನರ್ ಹಿಡಿಯಬಲ್ಲದು ಎಂಬುದಕ್ಕೆ ಗೌರಿಯೇ ಸಾಕ್ಷಿಯಾಗಿದ್ದಾಳೆ. ಒಂದು ಊರಿನಲ್ಲಿರುವ ಕೈಪಂಪು (ಬೋರ್‌ವೆಲ್) ರಿಪೇರಿಗೆ ಬರುತ್ತದೆ. ಆ ಊರಿನ ಮಹಿಳೆಯರು ಎಷ್ಟು ಜಗ್ಗಿದರೂ ನೀರು ಬರುವುದಿಲ್ಲ. ಇದನ್ನು ಕಂಡ ಮಹಿಳೆಯರು

ತಬ್ಬಿಬ್ಬಾಗುತ್ತಾರೆ. ಪಂಚಾಯಿತಿ ಅಧ್ಯಕ್ಷರಿಗೆ ದೂರು ನೀಡಿದರೂ, ಅವರಿಗೆ ಭರವಸೆಯನ್ನು ಕೊಟ್ಟು ರಿಪೇರಿ ಮಾಡಿಸುವುದಾಗಿ ಹೇಳಿ ಹಿಂದಕ್ಕೆ ಕಳುಹಿಸುತ್ತಾನೆ. ಇದು ಅಧ್ಯಕ್ಷರ ದೌರ್ಬಲ್ಯವಾಗಿದೆ.

ಈ ವಿಚಾರವಾಗಿ ಮಹಿಳೆಯರು ಎಲ್ಲರೂ ಒಟ್ಟಿಗೆ ಸೇರಿ, ಯೋಚಿಸಿ, ತಾವೇ ಒಂದು ಸಂಘವನ್ನು ಕಟ್ಟಿಕೊಂಡು, ಗೌರಿ ಎನ್ನುವ ಹೆಣ್ಣುಮಗಳಿಗೆ ಕೈಪಂಪು ರಿಪೇರಿ ಮಾಡುವ ತರಬೇತಿಯನ್ನು ನೀಡಿ, ಆ ಮುಖಾಂತರ ತಮ್ಮ ಸಮಸ್ಯೆಗಳಿಗೆ ತಾವೆ ಪರಿಹಾರ ಕಂಡುಕೊಳ್ಳುತ್ತಾರೆ. ಇದು ಅವರ ಕಾಳಜಿ ಮತ್ತು ಪ್ರಜ್ಞೆಯನ್ನು ಪ್ರತಿಬಿಂಬಿಸುವುದರ ಜೊತೆಗೆ, ಪರಾವಲಂಬಿಗಳಾಗದೆ ಸ್ವಾವಲಂಬಿಗಳಾಗುವತ್ತ ಚಿಂತಿಸುವುದು ಗೋಚರವಾಗುತ್ತದೆ. ಗೌರಿಯು ಕೊಳವೆ ಬಾವಿ ರಿಪೇರಿ ಮಾಡುವ ಸಮಯದಲ್ಲಿ ಊರಿನ ಗ್ರಾಮಪಂಚಾಯ್ತಿ ಅಧ್ಯಕ್ಷರಿಂದ ಜಾತಿ ನಿಂದನೆಗೆ ಒಳಗಾಗುತ್ತಾಳೆ. ಆದರೂ ಅವಳು ಎದೆಗುಂದದೆ ತನ್ನ ಕೆಲಸದ ಮೂಲಕವೇ ಉತ್ತರಿಸುತ್ತಾಳೆ. ಗೌರವಯುತ ಸ್ಥಾನದಲ್ಲಿರುವ ಅಧ್ಯಕ್ಷರೇ ಜಾತಿ ನಿಂದನೆ ಮಾಡುವುದು ಸರಿಯಲ್ಲ ಎನ್ನುವುದು ನಾಟಕದಲ್ಲಿ ವ್ಯಕ್ತವಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಗೌರಿಯಂತಹ ಹೆಣ್ಣು ಮಕ್ಕಳು ಆದರ್ಶಮಯವಾಗಿ ನಿಲ್ಲುತ್ತಾರೆ. ಪ್ರಸ್ತುತ ದಿನಗಳಲ್ಲಿ ಪುರುಷರಿಗೆ ಕಡಿಮೆ ಇಲ್ಲದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ಗುರುತಿಸಿ ಕೊಂಡಿದ್ದಾರೆ. ಅವಳು ಪರಾವಲಂಬಿಯಾಗದೆ ಸ್ವಾವಲಂಬಿಯಾದರೆ ಘನತೆ, ಗೌರವಗಳಿಂದ ಉನ್ನತ ಸ್ಥಾನಕ್ಕೇರುತ್ತಾಳೆ. ಕೌಶಲ ಎನ್ನುವುದು ಹೆಣ್ಣಿಗೆ ಬಹುಮುಖ್ಯ. ಅದೊಂದು ಅವಶ್ಯಕ ಆಯುಧ. ನಾರಿ ತನ್ನ ಸಾಮಾರ್ಥ್ಯಗಳನ್ನು ಅರಿತರೆ ನೂರು ದಾರಿಗಳಿಗೆ ಬಿಡುಗಡೆ ಸಿಕ್ಕಿದಂತಾಗುತ್ತದೆ ಎನ್ನುವುದು ನಾಟಕದ ಆಶಯವಾಗಿದೆ. ಹೆಣ್ಣು ಮಕ್ಕಳು ಸಬಲರಾಗಬೇಕೆಂಬ ಚಿಂತನೆಯೊಂದಿಗೆ ದೈಹಿಕವಾಗಿಯೂ ಸಮರ್ಥಳು ಎನ್ನುವುದನ್ನು ನಾಟಕ ಪ್ರತಿನಿಧಿಕರಿಸುತ್ತದೆ.

'ನಾಯಿತಿಪ್ಪ' ಎಂಬ ನಾಟಕವು ಬ್ರಾಹ್ಮಣೀಕರಣ ಹಾಗೂ ಜಾಗತೀಕರಣಗಳ ಪ್ರತಿರೋಧವಾಗಿ ತಳಸಮುದಾಯಗಳ ಜಾನಪದೀಯ ವಿವೇಕದ ಬಂಡಾಯವನ್ನು ಚಿತ್ರಿಸುವ ನಾಟಕವಾಗಿದೆ. ಈ ನಾಟಕದಲ್ಲಿ 'ತಿಪ್ಪ' ಎಂಬ ಹುಡುಗ ಕೇಂದ್ರಬಿಂದು ಆಗಿದ್ದಾನೆ. ಊರಿನಲ್ಲಿ ಬರಗಾಲ ಎದುರಾದಾಗ ಉದ್ಯೋಗವನ್ನು ಹರಸಿ ತಿಪ್ಪನು ನಗರಕ್ಕೆ ಬರುತ್ತಾನೆ. ಆತನು ನಗರದ ಜೀವನ ಕಂಡು ಭಯಭೀತನಾಗುತ್ತಾನೆ. ನಗರದ ಜೀವನ ಅವನಿಗೆ ಸ್ವಲ್ಪವೂ ಒಗ್ಗುವುದಿಲ್ಲ. ಹಣ ಸಂಪಾದಿಸಲು ಕೆಲಸಕ್ಕೆ ಸೇರುತ್ತಾನೆ. ಅಲ್ಲಿ ಸಂಬಳ ಸಿಗುವ ಬದಲು ಏಟು ಬೀಳುತ್ತದೆ. ಉದ್ಯೋಗ ಪಡೆಯಲು ಶಿಕ್ಷಣ ಮುಖ್ಯ ಎಂದು ತಿಳಿದು ಶಾಲೆಗೆ ಸೇರುತ್ತಾನೆ. ಮೇಲ್ವರ್ಗದ ವಿದ್ಯಾರ್ಥಿಗಳು ಕೀಳೂ ಜಾತಿಯವನೆಂದು ಅದನ್ನು ವಿರೋಧಿಸುತ್ತಾರೆ. ನಗರದಲ್ಲಿ ತಮ್ಮ ಜನರೇ ಅವನನ್ನು ಅವಮಾನಿಸುತ್ತಾರೆ. ಇದರಿಂದ ಬೇಸತ್ತು ತಿಪ್ಪನು ತನ್ನ ಊರಿಗೆ ಮರಳುತ್ತಾನೆ. ತನ್ನ ಗುಡಿಸಲನ್ನು ಗೌಡರಿಗೆ ಬಿಟ್ಟುಕೊಟ್ಟು ಸಣ್ಣ ವ್ಯಾಪಾರ ಮಾಡಲು ಮುಂದಾಗುತ್ತಾನೆ. ಈ ರೀತಿ ಕಥೆ ಸಾಗುತ್ತದೆ.

ತಿಪ್ಪನ ಅಜ್ಜಿಯು ಅವನಿಗೆ ತಂದೆ, ತಾಯಿ, ಬಂಧು, ಬಳಗ ಎಲ್ಲವೂ ಆಗಿ ಆತನ ಬೆನ್ನೆಲುಬಾಗಿ ಎಲ್ಲಾ ಸಮಯದಲ್ಲೂ ನಿಲ್ಲುತ್ತಾಳೆ. ನಗರದಲ್ಲಿ ತಿಪ್ಪನು ಸಂಪಾದಿಸಿ ತಂದ ಹಣವನ್ನು ಅಗತ್ಯಕ್ಕಿಂತ ಜಾಸ್ತಿ ಇದೆ ಎಂಬುದನ್ನು ತಿಳಿದು ಅದನ್ನು ತಿರಸ್ಕರಿಸುತ್ತಾಳೆ. "ಸಿವಪ್ಪಾ ಇದಾ ಈ ನನ್ನ ಎಕ್ಕಡದ ಒಂದು ತುಂಡಾ ಇಲ್ಲಿ ಹೆಣ ಹುಗಿದಂಗೆ ಹುಗಿದಿಟ್ಟೀನಿ. ಇದು ಈ ನನ್ನ ಕೂಸಂಥ ಕೂಸ ಕೈಗೆ ಸಿಗೋ ಹಂಗೆ ಮಾಡು, ಅಷ್ಟು ಮಾಡಿ ನೀ ಸಿವಾ ಅನ್ನುಸ್ಕೋ" ಎನ್ನುವ ಅಜ್ಜಿಯ ಮಾತುಗಳು ಆಕೆಯ ಉದಾರತೆಯನ್ನು ತೋರಿಸುತ್ತದೆ.

ತಮ್ಮಂತೆ ಇರುವ ಬಡವರಿಗೆ ಸಂಪತ್ತನ್ನು ಜನಮುಖಿಗೊಳಿಸುವುದು ಆಕೆಯ ಸದ್ಗುಣವಾಗಿದೆ. ಅಜ್ಜಿಯು ವಾಸ್ತವದ ಬದುಕಿಗೆ ಪ್ರಾಶಸ್ತ್ಯ ಕೊಡುವವಳು. ಹಣವಕ್ಕೆ ಜೋತು ಬಿದ್ದವಳಲ್ಲ, ಹಾಗಾಗಿ ಹಣಕ್ಕೆ ಬೆಲೆ ಕೊಡುವುದಿಲ್ಲ, ವಾಸ್ತವದ ಬದುಕನ್ನು ತಿಪ್ಪನು ಅರ್ಥೈಸಿಕೊಳ್ಳುವಂತೆ ತಿಳಿ ಹೇಳುತ್ತಾಳೆ. ಅವಳ ಜನಪದ ವಿವೇಕ, ಜಾಣ್ಮೆಯ ಮುಂದೆ ಕಾಲದಿಂದ ಕಾಲಕ್ಕೆ ತಳಸಮುದಾಯದ ಜನರನ್ನು ಶೋಷಿಸುತ್ತಾ ಬಂದಿರುವ ಶೋಷಕ ಸಂಸ್ಕೃತಿಯು ಬಲಹೀನವಾಗಿ ಬಿಡುತ್ತದೆ. ಹೀಗೆ ತಳಸಮುದಾಯ ತನ್ನ ಜೀವನವನ್ನು ಕಟ್ಟಿಕೊಳ್ಳಲು ನಡೆಸುವ ಹೊಯ್ದಾಟವನ್ನು, ಶೋಷಕ ಸಂಸ್ಕೃತಿ ಕೊಳಕು ಮನಸ್ಸನ್ನು ನಾಟಕವು ಪ್ರತಿರೋಧಕವಾಗಿ ಚಿತ್ರಿಸಿದೆ.

'ಪುಟ್ಬಾಲ್ ಆಟ' ನಾಟಕವು ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಸಮಾನತೆಯನ್ನು ಕುರಿತ ನಾಟಕವಾಗಿದೆ. ಗಂಡು ಮೇಲು, ಹೆಣ್ಣು ಕೀಳೆಂಬ ಈ ಕಾಲದಲ್ಲಿ ಗಂಡಿನಂತೆ ಹೆಣ್ಣು ಮಕ್ಕಳು ಪ್ರಬಲರು ಎನ್ನುವುದನ್ನು ನಾಟಕವು ಧ್ವನಿಸುತ್ತದೆ. ಇಂದಿನ ಮಹಿಳೆ ತನ್ನ ಮೇಲಿನ ಶೋಷಣೆಯನ್ನು ಸಹಿಸಿಕೊಳ್ಳದೆ ಅದನ್ನು ಪ್ರಶ್ನಿಸುವ ಮತ್ತು ಪ್ರತಿಭಟಿಸುವ ಹಂತಕ್ಕೆ ಬಂದಿದ್ದಾಳೆ. ಕೋಮಲತೆ, ಭಯ, ಭೀತಿ, ಸಹನೆ, ಪರಾವಲಂಬನೆ, ಆತಂಕದ ಗುಣಗಳು ಹೆಣ್ಣಿನದು ಎಂದು ಬೆಳೆದು ಬಂದಿರುವ ಪೂರ್ವಾಗ್ರಹ ಪೀಡಿತ ಸಮಾಜಕ್ಕೆ ಹೆಣ್ಣು ಕೂಡ ಸಬಲಳು ಎಂಬುದು ನಾಟಕದಲ್ಲಿ ವ್ಯಕ್ತವಾಗಿದೆ. ಈ ನಾಟಕದಲ್ಲಿ ಮುನಿಯಮ್ಮ ಎಂಬ ಗ್ರಾಮ ಪಂಚಾಯ್ತಿ ಸದಸ್ಯೆಯ ಪಾತ್ರ ಬಹಳ ಮುಖ್ಯವಾದುದು. ಕನಕ, ದಮಯಂತಿ, ಮಾಲಿಂಗ ಇವರ ಪಾತ್ರಗಳು ಪ್ರಮುಖವಾಗಿವೆ.

ಶಾಲೆಯ ಆವರಣದಲ್ಲಿ ಪುಟ್ಬಾಲ್ ಆಟದೊಂದಿಗೆ ನಾಟಕವು ಆರಂಭವಾಗುತ್ತದೆ. ಗಂಡು ಮಕ್ಕಳು ಒದ್ದಂತಹ ಪುಟ್ಬಾಲ್ ಚೆಂಡು ಅಕಸ್ಮಾತಾಗಿ ಹೆಣ್ಣು ಮಕ್ಕಳ ಕಾಲ ಹತ್ತಿರ ಬಂದು ಬೀಳುತ್ತದೆ. ಅದನ್ನು ಕನಕ ಎಂಬುವವಳು ಎತ್ತಿ ಕೊಳ್ಳುತ್ತಾಳೆ. ಗಂಡು ಮಕ್ಕಳು ಅವಳನ್ನು ಮೂದಲಿಸಿ ಮಾತನಾಡುತ್ತಾರೆ. ಪುಟ್ಬಾಲ್ ಆಟ ಹುಡುಗರಿಗೆ ಸೀಮಿತ. ನೀನು ಹೆಣ್ಣು ಅದನ್ನು ಒದೆಯಲು ಅಸಮರ್ಥಳು ಎಂಬುದಾಗಿ ಜರಿಯುತ್ತಾರೆ. ಇದಕ್ಕೆ ಪ್ರತಿಯಾಗಿ ಕನಕ ಒದ್ದಂತಹ ಚೆಂಡು ನಿರೀಕ್ಷೆಗೂ ಮೀರಿ ಗೋಲ್‌ನಿಂದ ಆಚೆ ತಲುಪುತ್ತದೆ. ಹುಡುಗರೆಲ್ಲಾ ಈ ದೃಶ್ಯವನ್ನು ಕಂಡು ಮೂಕವಿಸ್ಮಿತರಾಗಿ ನಿಲ್ಲುತ್ತಾರೆ. ಕನಕ ನಾವು ಕೂಡ ಗಂಡಿನಷ್ಟೇ ಪ್ರಬಲರು ಎನ್ನುವುದನ್ನು ಚೆಂಡು ಒದೆಯುವ ಮುಖಾಂತರವೇ ಉತ್ತರಿಸುತ್ತಾಳೆ.

ದೃಶ್ಯ ಎರಡರಲ್ಲಿ ಮಾಲಿಂಗ ಎಂಬುವವನು ತನ್ನ ಮಗಳಾದ ಕನಕಳನ್ನು ಶಾಲೆಯಿಂದ ಮನೆ, ಗದ್ದೆ ಕೆಲಸ ಮಾಡಲು ಕರೆದುಕೊಂಡು ಬರುವುದು, ತನ್ನ ಮಗನನ್ನು ಮಾತ್ರ ಶಾಲೆಯಲ್ಲೆ ಬಿಡುವುದು ಆತನ ಮಲತಾಯಿ ಧೋರಣೆಯಾಗಿದೆ. ಇದನ್ನು ಶಿಕ್ಷಕರು ಪ್ರಶ್ನಿಸುವುದಿಲ್ಲ. ಸುಮ್ಮನೆ ಮಾಲಿಂಗನ ಜೊತೆ ಕಳಿಸಿಕೊಡುವುದು ಅವರ ಬೇಜವಾಬ್ದಾರಿಯಾಗಿರುತ್ತದೆ. ಈ ದೃಶ್ಯವನ್ನು ದೂರದಲ್ಲಿ ನಿಂತು ಗಮನಿಸುತ್ತಿದ್ದಂತಹ ಗ್ರಾಮ ಪಂಚಾಯ್ತಿ ಸದಸ್ಯೆಯಾದ ಮುನಿಯಮ್ಮ ಶಿಕ್ಷಕರು ಹಾಗೂ ಮಾಲಿಂಗನನ್ನು ಪ್ರಶ್ನಿಸಿ, ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವವನ್ನು ಅವರಿಗೆ ತಿಳಿಸುತ್ತಾಳೆ. ಅವರ ತಪ್ಪಿನ ಅರಿವಾಗಿ ಮುನಿಯಮ್ಮನಲ್ಲಿ ಕ್ಷಮೆಯನ್ನು ಯಾಚಿಸುತ್ತಾರೆ. ಹೀಗೆ ಮುನಿಯಮ್ಮನು ಕನಕ ಎಂಬುವವಳು ಮತ್ತೆ ಶಾಲೆಯಲ್ಲಿ ಓದುವಂತೆ ಅವಕಾಶ ಕಲ್ಪಿಸಿಕೊಡುತ್ತಾಳೆ. ಅವಳಂತೆ ಇತರ ಹೆಣ್ಣು ಮಕ್ಕಳು ಶಾಲೆಗೆ ಬರುವಂತೆ ಪ್ರೇರಣೆ ನೀಡುತ್ತಾಳೆ. ಕೊನೆಗೆ ಮುನಿಯಮ್ಮ ಶಾಲೆಯಲ್ಲಿ ಪುಟ್ಬಾಲ್ ಚೆಂಡು ಒದೆಯುವುದರ ಮೂಲಕ

ಆಟಕ್ಕೆ ಚಾಲನೆಯನ್ನು ನೀಡಿ ಗಂಡು ಹೆಣ್ಣಿನ ಭೇದವನ್ನು ಹೋಗಲಾಡಿಸಿ, ಅವರನ್ನು ಮುಪ್ಪುರಿಯಂತೆ ಬೆಸೆಯುವುದರಲ್ಲಿ ಯಶಸ್ವಿಯಾಗುತ್ತಾಳೆ. ಹೀಗೆ ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ನಾಟಕದಲ್ಲಿ ವ್ಯಕ್ತವಾಗಿದೆ. 'ಓದು ಬರಹ ಕಲಿತ ನಾರಿ ಸುಖ ಸಂಸಾರಕ್ಕೆ ದಾರಿ' ಎಂಬುದನ್ನು ನಾಟಕ ಪ್ರತಿನಿಧಿಸುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಕೋಟಿಗಾನಹಳ್ಳಿ ರಾಮಯ್ಯ ಅವರು ತಮ್ಮ ನಾಟಕಗಳಲ್ಲಿ ಮಹಿಳಾ ಪರವಾದ ದನಿಯನ್ನು ಎತ್ತಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದಲಿತರನ್ನು, ಮಹಿಳೆಯರನ್ನು, ಒಂದಲ್ಲಾ ಒಂದು ರೀತಿಯಲ್ಲಿ ದೌರ್ಜನ್ಯಕ್ಕೆ ಗುರಿ ಮಾಡಲಾಗುತ್ತಿದೆ. ಜಾತಿ, ಲಿಂಗ, ಧರ್ಮದ ಹೆಸರಿನಲ್ಲಿ ಪ್ರತಿನಿತ್ಯ ಹಲವಾರು ಜನರು ಶೋಷಣೆಗೆ ಒಳಗಾಗುತ್ತಿದ್ದಾರೆ. ಕೊಲೆ, ಅತ್ಯಾಚಾರ, ದರೋಡೆಗಳಂತಹ ಸಮಾಜ ಘಾತುಕ ಕೆಲಸಗಳು ನಮ್ಮ ಸಮಾಜದಲ್ಲಿ ಇಂದಿಗೂ ಜರುಗುತ್ತದೆ. ಸಮಾಜದಲ್ಲಿರುವ ನೀಚ ಕೃತ್ಯಗಳನ್ನು ತಮ್ಮ ನಾಟಕಗಳಲ್ಲಿ ಪಾತ್ರಗಳ ಮುಖಾಂತರ ಪ್ರಶ್ನಿಸಿದ್ದಾರೆ. ಸಮ ಸಮಾಜದ ನಿರ್ಮಾಣದ ಹಂಬಲವನ್ನು ಅಭಿವ್ಯಕ್ತಪಡಿಸಿದ್ದಾರೆ. ಪ್ರಸ್ತುತದಲ್ಲಿ ಇರುವ ಮಹಿಳಾ ಸಮಸ್ಯೆ ಹಾಗೂ ಶೋಷಣೆಯನ್ನು ಪ್ರತಿಭಟಿಸುವುದರೊಂದಿಗೆ, ಗಂಡು–ಹೆಣ್ಣಿನ ಸಮಾನತೆ ಬಯಸುವವರಾಗಿದ್ದಾರೆ. ಈ ರೀತಿಯಾಗಿ ಅವರ ನಾಟಕಗಳಲ್ಲಿ ಮಹಿಳಾ ಪರ ನಿಲುವುಗಳು ಹೊರಹೊಮ್ಮಿದ್ದು, ಪ್ರಸ್ತುತ ಸಂದರ್ಭದಲ್ಲಿಯೂ ಜಾಗೃತಿ ಉಂಟು ಮಾಡುವಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (ಪ್ರ. ಸಂ.). (2014). ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–6, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಕೋಟಿಗಾನಹಳ್ಳಿ ರಾಮಯ್ಯ. (1999). ಮೆಕಾನಿಕ್ ಗೌರಿ. ವಿಶ್ವಾಲಯ ಪ್ರಕಾಶನ, ಇಂದಿರಾನಗರ, ಬೆಂಗಳೂರು.
- ಕೋಟಿಗಾನಹಳ್ಳಿ ರಾಮಯ್ಯ. (1999). ಪುಟ್ಬಾಲ್ ಆಟ. ವಿಶ್ವಾಲಯ ಪ್ರಕಾಶನ, ಇಂದಿರಾನಗರ, ಬೆಂಗಳೂರು.
- ಕೋಟಿಗಾನಹಳ್ಳಿ ರಾಮಯ್ಯ. (2013). ನಾಯಿತಿಪ್ಪ. ಅರುಣ ಪ್ರಕಾಶನ, ಶ್ರೀಗಂಧಕಾವಲು, ಬೆಂಗಳೂರು.
- ನಂಜುಂಡಸ್ವಾಮಿ ತೊಟ್ಟವಾಡಿ (ಸಂ.) (2011). ಕೊನೆ ಎಂದು, ಅರಿವಿನಂಗಳ. ರಂಗಚೇತನ ಸಂಸ್ಕೃತಿ ಕೇಂದ್ರ ಟ್ರಸ್ಟ್, ಬೆಂಗಳೂರು.